**ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಇಂಡಿ**

**ಕ್ರಿ.ಮಿ. ನಂ:348/2020**

**ಆರ್ ಡಬ್ಲ್ಯೂ -1**

**ದಿ: 26-06-2024 ರ ಮೇರೆಗೆ ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ:ಎಸ್.ಎಲ್.ಬಿ.. ವಕೀಲರಿಂದ:**

ಸ್ಪಂದನಾ ಆಸ್ಪತ್ರೆಯವರು ನೀಡಿದ 15 ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿ.ಡಿ.1 ರಿಂದ 15 ಎಂದು,

ಸೋಪಿ ಮಲ್ಟಿಸ್ಪೇಶಾಲಿಟಿ ಆಸ್ಪತ್ರೆ ಜೇವರಗಿರವರು ನೀಡಿದ 3 ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿ.ಡಿ.16 ರಿಂದ 18 ಎಂದು,

ಸಾಯಿನಾಥ ಸೆಕ್ಯೂರಿಟಿ ಕೊರ್ಸ ವಿಜಯಪುರ ರವರು ನೀಡಿದ ಸೇವಾ ದೃಢಿಕರಣ ಪತ್ರ ಹಾಜರುಪಡಿಸಿದ್ದು ಅದನ್ನು ನಿ.ಪಿ.1 ಎಂದು,

ಅಪರಾದ ಸಂಖ್ಯೆಃ 3/2024 ರ ಪ್ರ.ವ.ವ.ವನ್ನು ಹಾಜರುಪಡಿಸಿದ್ದು ಅದನ್ನು ನಿ.ಡಿ.20 ಎಂದು,

ವಿ.ಆರ್.ಎಲ್. ರವರು ನೀಡಿದ ಪ್ರಯಾಣದ ಟೀಕೆಟನ್ನು ಹಾಜರುಪಡಿಸಿದ್ದು ಅದನ್ನು ನಿ.ಡಿ.21 ಎಂದು,

5 ಚಾಯಾಚಿತ್ರಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿ.ಡಿ.22 ರಿಂದ 26 ಎಂದು,

1 ರಶೀದಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಡಿ.27 ಎಂದು,

1 ಸೀಡಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಡಿ.22 ಎಂದು ಗುರುತಿಸಲಾಯಿತು.

**ಪಾಟೀ ಸವಾಲು: ಅರ್ಜಿದಾರರ ಪರವಾಗಿ ಶ್ರೀ. ಜೆಡ.ಬಿ.ಬಿ. ವಕೀಲರಿಂದಃ**

ನಾನು ಖಾಯಂ ತರೀಖವಾಗಿ ನಂ. 146 2 ನೇ ಮೇನ ಮುಖ್ಯ ರಸ್ತೆ ಮಾಗಡಿ ರೋಡ ಬೆಂಗಳೂರು 23 ರಲ್ಲಿ ವಾಸವಾಗಿರುತ್ತೇನೆ. ನಾನು ಅರ್ಜಿದಾರರೊಂದಿಗೆ ವಿವಾರವಾದಾಗಿನಿಂದ ಇಲ್ಲಿಯವರೆಗೂ ಮೇಲೆ ಹೇಳಿದ ವಿಳಾಸದಲ್ಲಿ ವಾಸವಾಗಿರುತ್ತೇನೆ ಎಂದರೆ ಸರಿ. ನಮ್ಮ ತಂದೆಯ ಹೆಸರು ಮಹಮ್ಮದ ಸೂಫಿ ಎಂದರೆ ಸರಿ. ನಮ್ಮ ತಂದೆಗೆ 3 ಜನ ಗಂಡು ಮಕ್ಕಳು, ಇಬ್ಬರು ಹೆಣ್ಣು ಮಕ್ಕಳು ಇರುತ್ತೇವೆ. ಎಲ್ಲರ ವಿವಾಹ ಆಗಿರುತ್ತದೆ. ನನ್ನ ಸಹೋದರಿ ಇಸ್ಮಾಲಾ ಬೇಗಂ ಬೆಂಗಳೂರಿನಲ್ಲಿ ವಾಸವಾಗಿರುತ್ತಾರೆ. ಪರಜಾನಾ ಬೇಗಂ ಶಹಾಪೂರದಲ್ಲಿ ವಾಸವಾಗಿರುತ್ತಾರೆ. ನನ್ನ ಸಹೋದರರಲ್ಲಿ ಒಬ್ಬರು ಜೇವರಗಿಯಲ್ಲಿ ಇನ್ನೊಬ್ಬರು ಅಂದೋಲಾದಲ್ಲಿ ವಾಸವಾಗಿರುತ್ತಾರೆ.

1 ನೇ ಅರ್ಜಿದಾರಳೊಂದಿಗೆ ನನ್ನ ವಿವಾಹ ದಿನಾಂಕಃ 20.10.2008 ರಂದು ಇಂದಿರಾ ನಗರ ಸಿಂದಗಿಯಲ್ಲಿ ಆಗಿರುತ್ತದೆ ಎಂದರೆ ಸರಿ. 1 ನೇ ಅರ್ಜಿದಾರಳು ಮದುವೆಯ ನಂತರ ನನ್ನೊಂದಿಗೆ ಸಂಸಾರ ಮಾಡಲು

ಬೆಂಗಳೂರಿನಲ್ಲಿರುವ ನನ್ನ ಮನೆಗೆ ಬಂದಿದ್ದಳು ಎಂದರೆ ಸರಿ. ವಿದ್ಯಾನಗರದಲ್ಲಿರುವ ನನ್ನ ಮನೆ ನನ್ನ ಸ್ವಂತ ಮನೆ ಅಲ್ಲ ಎಂದರೆ ಸರಿಯಲ್ಲ. ಜೇವರಗಿಯಲ್ಲಿ ನನ್ನ ತಂದೆ ಹೆಸರಿಗೆ 98/1 3 ಎಕರೆ 20 ಗುಂಟೆ 98/3 6 ಎಕರೆ 29 ಗುಂಟೆ ಇರುತ್ತದೆ ಎಂದರೆ ಸಾಕ್ಷಿ ಒಂದೇ ಜಮೀನು ಇದ್ದು ಅದರಲ್ಲಿ ಭಾಗ ಆಗಿರುತ್ತದೆ ಅಂತಾ ನುಡಿಯುತ್ತಾರೆ. ಸರ್ವೆ ನಂ. 98/3 6 ಎಕರೆ 29 ಗುಂಟೆಯಲ್ಲಿ ನನ್ನ ತಂದೆಗೂ ಮತ್ತು ನನ್ನ ಚಿಕ್ಕಪ್ಪನಿಗೂ ಅರ್ದ ಅರ್ದ ಭಾಗ ಇರುತ್ತದೆ ಎಂದರೆ ಸರಿಯಲ್ಲ. ಜೇವರಗಿಯಲ್ಲಿ ಖುಲ್ಲಾ ಜಾಗೆ ಮತ್ತು ಸ್ವಂತ ಮನೆ ನನ್ನ ಮತ್ತು ನನ್ನ ತಂದೆ ಹೆಸರಿಗೆ ಇರುತ್ತದೆ ಎಂದರೆ ಸರಿಯಲ್ಲ. ಜೇವರಗಿ ಗ್ರಾಮದಲ್ಲಿ ಮನೆ ಮತ್ತು ಖಾಲಿ ಜಾಗೆ ನನ್ನ ಹಾಗೂ ನನ್ನ ತಂದೆ ಹೆಸರಿಗೆ ಇರುವುದಿಲ್ಲ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಮನೆಯಿಂದ ನಮಗೆ ತಿಂಗಳಿಗೆ 8 ರಿಂದ 10 ಸಾವಿರ ರೂಪಾಯಿ ಬಾಡಿಗೆ ಬರುತ್ತದೆ ಎಂದರೆ ಸರಿಯಲ್ಲ. ನನ್ನ ತಂದೆ ಹೆಸರಿಗೆ ಖಾತೆ ಇರುವ 3 ಎಕರೆ 20 ಗುಂಟೆ ಜಮೀನು ನೀರಾವರಿ ಜಮೀನು ಆಗಿದ್ದು, ಸಾಕಷ್ಟು ಆದಾಯ ಇರುತ್ತದೆ ಎಂದರೆ ಸಾಕ್ಷಿ ಅದು ನೀರಾವರಿ ಜಮೀನು ಅಲ್ಲ ಮೆಲ್ಬೂಮಿ ಆಗಿರುತ್ತದೆ ಅದರಿಂದ ನನಗೆ ಯಾವುದೇ ಆದಾಯ ಇಲ್ಲ ಅಂತಾ ನುಡಿಯುತ್ತಾರೆ. ನನ್ನ ಹೆಸರಿಗೆ 2 ಕ್ಯಾಬ ಇದ್ದು ಅವುಗಳಿಂದ ನನಗೆ ತಿಂಗಳಿಗೆ 60 ರಿಂದ 70 ಸಾವಿರ ಆದಾಯ ಇರುತ್ತದೆ ಎಂದರೆ ಸರಿಯಲ್ಲ.

ಅರ್ಜಿದಾರಳು ನನ್ನ ಮನೆಗೆ ಜೀವನ ಸಾಗಿಸಲು ಬಂದಾಗ ನಾನು ನನ್ನ ಕುಟುಂಬದ ಎಲ್ಲ ಸದಸ್ಯರು ಅವಳಿಗೆ ಕಿರುಕುಳ ನೀಡಿದ್ದೇವು ಎಂದರೆ ಸರಿಯಲ್ಲ. ಸದರಿ ವಿಷಯವಾಗಿ ಸಾಕಷ್ಟು ಬಾರಿ ನ್ಯಾಯ ಪಂಚಾಯತಿ ಆಗಿದ್ದರು ಬುದ್ದಿವಾದ ಹೇಳಿದ್ದರು ನಾನು 1ನೇ ಅರ್ಜಿದಾರಳಿಗೆ ಕಿರುಕುಳ ಬಟ್ಟಿರಲಿಲ್ಲ ಎಂದರೆ ಸರಿಯಲ್ಲ. ಇಷ್ಟೆಲ್ಲ ಕಿರುಕುಳ ಕೊಟ್ಟಿದ್ದರು 1ನೇ ಅರ್ಜಿದಾರಳು ಎಲ್ಲ ಸಹಿಸಿಕೊಂಡು ನಮ್ಮ ಮನೆಯಲ್ಲಿ ವಾಸವಾಗಿದ್ದಳು ಎಂದರೆ 6 ರಿಂದ 7 ತಿಂಗಳು ಮಾತ್ರ ವಾಸವಾಗಿದ್ದಳು ಅಂತಾ ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಯಾವುದೇ ಕಿರುಕುಳ ನೀಡಿಲ್ಲ ಅಂತಾ ನುಡಿಯುತ್ತಾರೆ. 2ನೇ ಅರ್ಜಿದಾರ ನಮ್ಮ ದಾಂಪತ್ಯ ಜೀವನದಿಂದ ಜನಿಸಿರುತ್ತಾನೆ ಎಂದರೆ ಸರಿ. ಒಟ್ಟು 1ನೇ ಅರ್ಜಿದಾರಳು ನಮ್ಮ ಮನೆಯಲ್ಲಿ ಸುಮಾರು 6 ರಿಂದ 7 ತಿಂಗಳು ಮಾತ್ರ ವಾಸವಾಗಿದ್ದಳು. 22.10.2010 ರಂದು 1ನೇ ಅರ್ಜಿದಾರಳ ತಂದೆ ಅಬ್ದುಲ ರಜಾಕ ಮೋಮಿನ ತೀರಿಕೊಂಡಿರುತ್ತಾರೆ ಎಂದರೆ ಸರಿ. 1ನೇ ಅರ್ಜಿದಾರಳ ತಂದೆ ಜೀವಿತಾವಧಿ ಕಾಲದಲ್ಲಿ ಅರ್ಜಿದಾರರ ಜೀವನಾಂಶವನ್ನು ಅವರೇ ನೋಡಿಕೊಳ್ಳುತಿದ್ದರು ಎಂದರೆ ಸರಿಯಲ್ಲ. 2ನೇ ಅರ್ಜೊದರನಿಗೆ ಇಲ್ಲಿಯವರೆಗೂ ನಾನು ಯಾವುದೇ ಶೈಕ್ಷಣಿಕ, ಆರೋಗ್ಯ, ಆಹಾರ, ಬಟ್ಟೆಗಾಗಿ ಯಾವುದೇ ಹಣಕಾಸಿನ ನೆರವು ನೀಡಿಲ್ಲ ಎಂದರೆ ಸರಿಯಲ್ಲ. 2ನೇ ಅರ್ಜಿದಾರನಿಗೆ ಜೀವನಾಂಶ ನೀಡಿದ್ದರ ಕುರಿತು ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ. 2ನೇ ಅರ್ಜಿದಾರನಿಗೆ ಯಾವುದೇ ಹಣಕಾಸಿನ ಸಹಾಯ ಮಾಡದೇ ಇದ್ದರು ಸಹ ಮಾಡಿರುತ್ತೇನೆ ಅಂತಾ ಸುಳ್ಳು ಸಾಕ್ಷ್ಯ ಹೆಳುತ್ತಿದ್ದೇನೆ ಎಂದರೆ ಸರಿಯಲ್ಲ. 2ನೇ ಅರ್ಜಿದಾರನಿಗೆ ವಾರ್ಷಿಕ 1 ಲಕ್ಷ 20 ಸಾವಿರ ಶೈಕ್ಷಣಿಕ ಖರ್ಚು ಇರುತ್ತದೆ ಎಂದರೆ ಸರಿ. ನಾನು ಸದರಿ ಖರ್ಚನ್ನು

ಇಲ್ಲಿಯವರೆಗೂ ನೀಡಿಲ್ಲ ಎಂದರೆ ಸರಿಯಲ್ಲ.

ನಾನು ತಿಂಗಳಿಗೆ 60 ರಿಂದ 70 ಸಾವಿರ ಆದಾಯ ಪಡೆಯುತ್ತಿದ್ದು ಅರ್ಜಿದಾರರಿಗೆ ಅವರ ಮಾಗಣಿಯಂತೆ ಜೀವನಾಂಶ ನೀಡುವ ಸಾಮರ್ಥ್ಯ ಹೊಂದಿರುತ್ತೇನೆ ಎಂದರೆ ಸರಿಯಲ್ಲ. ಈ ಅರ್ಜಿ ದಾಖಲಿಸಿದ ನಂತರ ಜೀವನಾಂಶವನ್ನು ತಪ್ಪಿಸುಕೊಳ್ಳುವುದಕ್ಕಾಗಿ ಹೆಚ್ಚುವರಿ ದಿವಾಣಿ ನ್ಯಾಯಾಲಯ ಇಂಡಿಯಲ್ಲಿ ಅಸಲು ದಾವೆಯನ್ನು 1 ನೇ ಅರ್ಜಿದಾರರ ವಿರುದ್ಧ ವೈವಾಹಿಕ ಜೀವನ ಪೂನರ ಪ್ರಾಪ್ತಿ ಕೇಳಿ ದಾಖಲಿಸಿರುತ್ತೇನೆ ಎಂದರೆ ಸರಿ. ಅರ್ಜಿದಾರರು ನನ್ನ ಬಳಿ ಬಂದು ಜೀವನಾಂಶವನ್ನು ಪಡೆದುಕೊಂಡು ಹೋಗುತ್ತಿದ್ದರು. ಹಾಗಂತಾ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಅರ್ಜಿದಾರರನ್ನು ಮನೆಯಿಂದ ಹೊರಗೆ ಹಾಕಿದ ನಂತರ ಅವರಿಗೂ ನನಗೂ ಯಾವುದೇ ಸಂಪರ್ಕ ಇಲ್ಲ ಎಂದರೆ ಸಾಕ್ಷಿ ನಾನು ಮನೆಯಿಂದ ಹೊರ ಹಾಕಿಲ್ಲ ಅಂತಾ ನುಡಿಯುತ್ತಾರೆ.

ಸಾಯಿನಾಥ ಸೆಕ್ಯೂರಿಟಿ ಕೊರ್ಸ ವಿಜಯಪುರದಲ್ಲಿ ನನ್ನನ್ನು ದಿನಾಂಕಃ 01.01.2024 ರಂದು ನೇಮಕ ಮಾಡಿಕೊಂಡಿರುತ್ತಾರೆ ಅಂತಾ ಸಾಕ್ಷಿ ದಾಖಲೆಯನ್ನು ನೋಡಿ ನುಡಿಯುತ್ತಾರೆ. ಅರ್ಜಿದಾರರು ಸಾಕಷ್ಟು ಪ್ರಯತ್ನ ಮಾಡಿದರು ನಾನು ಅವರನ್ನು ಮರಳಿ ಕರೆದುಕೊಂಡು ಹೋಗಿರುವುದಿಲ್ಲ ಮತ್ತು ಅವರಿಗೆ ಯಾವುದೇ ಜೀವನಾಂಶ ನೀಡಿಲ್ಲ ಎಂದರೆ ಸರಿಯಲ್ಲ. ಬೆಂಗಳೂರಿನಲ್ಲಿ ನಾನು ಇನ್ನೊಬ್ಬ ಫಿರುದೋಸ ಅನ್ನುವ ಮಹಿಳೆಯೊಂದಿಗೆ 2 ನೇ ಮದುವೆ ಮಾಡಿಕೊಂಡಿದ್ದು ಅವರಿಗೆ ಅರಪಾಕ ಮತ್ತು ಮೇಹರ ಅಂತಾ ಇಬ್ಬರು ಮಕ್ಕಳು ಜನಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ 2 ನೇ ಹೆಂಡತಿಯ ಮಾತು ಕೇಳಿಕೊಂಡು ಅರ್ಜಿದಾರರಿಗೆ ನಾನು ಯಾವುದೇ ಜೀವನಾಂಶ ನೀಡುತ್ತಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರನ್ನು ನಾನು ಮರಳಿ ಕರೆದುಕೊಂಡು ಹೋಗಲು ಯಾವುದೇ ಪ್ರಯತ್ನ ಮಾಡಿಲ್ಲ ಎಂದರೆ ಸಾಕ್ಷಿ ತಾನು ಇಂದಿಗೂ ಮರಳಿ ಕರೆದುಕೊಂಡು ಹೋಗಲು ಸಿದ್ದನಿರುವುದಾಗಿ ನುಡಿಯುತ್ತಾರೆ.

2 ನೇ ಅರ್ಜಿದಾರ 9 ನೇ ತರಗತಿಯಲ್ಲಿ ಎಕ್ಸಲೆಂಟ ಶಾಲೆಯಲ್ಲಿ ಓದುತ್ತಿದ್ದ. ಈಗ ಎಲ್ಲಿ ಅಂತಾ ಮಾಹಿತಿ ಇಲ್ಲ. ಅರ್ಜಿದಾರರು ಮುಂಚೆ ಎಕ್ಸಲೆಂಟ ಶಾಲೆಯಲ್ಲಿ ಓದುತ್ತಿದ್ದ ಅಂತಾ ತಿಳಿಸಿದ್ದರು ಅಂತಾ ನುಡಿಯುತ್ತಾರೆ. 2 ನೇ ಅರ್ಜಿದಾರ ಇಂದಿನವರೆಗೂ ಯಾವ ಶಾಲೆಯಲ್ಲಿ ಓದುತ್ತಿದ್ದಾನೆ ಅಂತಾ ನನಗೆ ಗೊತ್ತಿಲ್ಲದಿದ್ದರು ಸಹ ಅರ್ಜಿದಾರರು ಸಲ್ಲಿಸಿದ ದಾಖಲೆಗಳನ್ನು ನ್ಯಾಯಾಲಯದ ಕಡತದಲ್ಲಿ ಪರಿಶೀಲಿಸಿ ಅದರ ಆದಾರದ ಮೇರೆಗೆ 2 ನೇ ಅರ್ಜಿದಾರ ಎಕ್ಸಲೆಂಟ ಶಾಲೆಯಲ್ಲಿ ಓದುತ್ತಿದ್ದಾನೆ ಅಂತಾ ಈಗ ಸುಳ್ಳು ಸಾಕ್ಷಿ ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ದಿನಾಂಕಃ 01.01.2024 ರಂದು ಹೊರಗುತ್ತಿಗೆ ಆಧಾರದ ಮೇರೆಗೆ ನಾನು ನೇಮಕಗೊಂಡು ಅದು ಖಾಯಂ ನೌಕರಿಯಲ್ಲ ನಾನು ಅರ್ಜಿದಾರರಿಗೆ ಅವರು ಮಾಹಣಿ ಮಾಡಿದಂತೆ ಜೀವನಾಂಶ ಕೊಡುವ ಸಾಮರ್ಥ್ಯವನ್ನು ಹೊಂದಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಸಹಿ/–**

**ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ.ಇಂಡಿ.**